ಗಿರುವುದಿಲ್ಲ. ಆದ್ದರಿಂದ ಅವರಿಗೆ ಸಿಕ್ಕುತ್ತದೆ. ಇನ್ನು ಮಾನ್ಯ ಆಜೀಜ್ ಸೇಟ್ ಅವರು ಹೇಳಿದ ಮಾತು ನಿಜ. ೧೫ ವರ್ಷಗಳಿಂದ ಯಾವ ಮುಖ್ಯ ಮಂತ್ರಿಗಳು ರಾಷ್ಟ್ರೀಕರಣದ ಬಗ್ಗೆ ಮುಂದೆ ಬಂದಾಗ ಆಗಲಿಲ್ಲ, ರಾಜಕೀಯ ಪ್ರಭಾವದಿಂದಲೂ ಆಗಲಿಲ್ಲ ಎಂದರು. Let us accept it.

ಶ್ರೀ ಡಿ.ಟಿ. ಮಾಯಣ್ಣ.—ನೀವು ಅದನ್ನೇ ಕಂಟಿನ್ಯೂ ಮಾಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ನನಗೆ ಅನುಕೂಲ ಬೇಕು ಅಂದರೆ ಕಂಟಿನ್ಯೂ ಮಾಡುತ್ತೇನೆ. ಅನುಕೂಲ ಬೇಡ ಅಂದರೆ ಬಿಡುತ್ತೇನೆ. No Chief Minister whether it is Sri Nijalingappa, or Sri Jatti or Sri Devaraj Urs, could take a decision because of political pressure from bus owners from South Kanara, Mysore, Chitradurga etc. Some of the bus-owners themselves were legislatures. I don't blame anybody. Under these circumstances we will do what we can do.

Land for Agricultural Produce Market Committee in Dharwar Land for Cold Storage

662. SRI BHAVU RAO DESHPANDE (Dharwad).—Will the Minister of State for Marketing and Muzrai be pleased to state:—

(a) whether it is a fact that Dharwad Agriculture Produce Market Committee has granted one acre of leand for construction of Cold Storage ;

(b) if so, whether the said land have been handed over to Horticulture Department for construction of Cold Storage ;

(c) if not reasons for the same ;

(d) who purchased the land which is in possession of the Market Committee ?

SRI SUDHENDRA RAO KASABE (Minister of State for Marketing and Muzrai).—

(a) Yes.

(b) No.

(c) The Chief Marketing Officer, Bangalore had requested the Director of Horticulture to intimate whether he was agreeable to pay the value of the land m ant for the construction of Cold Storage on no loss and no profit basis. There was no response from the Horticulture Department regarding the payment of the cost of the land.

(d) Dharwad Marketing Committee had purchased this land according to the Land Acquisition Rules.

ಶ್ರೀ ಬಾವುರಾವ್ ದೇಶಪಾಂಡೆ.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಶೈತ್ಯಾಗಾರಕ್ಕೆ ಒಂದು ಎಕರೆ ಜಮೀನು ಮಂಜೂರು ಮಾಡಿದ್ದು ನಿಜ ಅಂತ ಹೇಳಿದ್ದಾರೆ. ಆದರೆ ಆ ಜಮೀನನ್ನು ಶೈತ್ಯಾಗಾರ ಕಟ್ಟಲು ತೋಟಗಾರಿಕೆ ಇಲಾಖೆಯವರಿಗೆ ಕೊಟ್ಟಿಲ್ಲ ಅಂತ ಹೇಳಿದ್ದಾರೆ. ಮಾರ್ಕೆಟ್ ಸಮಿತಿಯವರು ಮೊದಲು ಇದನ್ನು ಕೊಡಬೇಕಾದರೆ ಬೆಲೆ ಏನಾದರೂ ನಿಗದಿ ಮಾಡಿದ್ದಾರೆ ?

† ಶ್ರೀ ಸುಧೀಂದ್ರರಾವ್ ಕಸಬೆ.- ಮೊದಲು ಅಲ್ಲಿ ನಾನ್ ಆಫಿಷಿಯಲ್ ಮೆಂಬರ್ಸ್ ಇದ್ದುದರಿಂದ ಅವರು ಪುಕ್ಕಸಟ್ಟೆ ಕೊಡಬೇಕೆಂದು ಮಾಡಿದ್ದರು.

ಶ್ರೀ ಬಾವುರಾವ್ ದೇಶಪಾಂಡೆ,—ಧಾರವಾಡ ಕೃಷಿ ಉತ್ಪನ್ನಗಳ ಮಾರುಕಟ್ಟೆ ಸಮಿತಿಯವರು ಅಲ್ಲಿ ರಚಿತವಾಗುವ ಶೈತ್ಯಾಗಾರಕ್ಕೆ ಒಂದು ಎಕರೆ ಜಮೀನು ಕೊಡಬೇಕು ಅಂತ ಮಾಡಿದ್ದರು. ಸರ್ಕಾರಕ್ಕೆ ಹೋದ ಮೇಲೆ ಮಾರ್ಕೆಟ್ ಚೀಫ್ ಆಫೀಸರ್ ಹಣ ಕೊಡಬೇಕು ಅಂತ ಕೇಳುತ್ತಿದ್ದಾರೆ.

ಶ್ರೀ ಸುಧೀಂದ್ರರಾವ್ ಕಸಬೆ.— ೧೧ ಎಕರೆ ೩೨ ಗುಂಟೆ ಜಮೀನನ್ನು ಸರ್ಕಾರದ ಲ್ಯಾಂಡ್ ಅಕ್ವಿಜಿಷನ್ ಆಕ್ಟ್ ಪ್ರಕಾರ ೩ ಲಕ್ಷ ಳಳ ಸಾವಿರ ರೂಪಾಯಿಗೆ ಪರ್ಚೇಸ್ ಮಾಡಲಾಗಿದೆ. ಮುಖ್ಯ ಮಾರುಕಟ್ಟೆ ಅಧಿಕಾರಿ, ಬೆಂಗಳೂರು ಅವರು ತೋಟಗಾರಿಕೆ ಇಲಾಖೆಯ ನಿರ್ದೇಶಕರನ್ನು ಲಾಭ ಹಾನಿ ಇಲ್ಲದ ತಳಹದಿಯ ಮೇಲೆ ಶೈತ್ಯಾಗಾರ ಕಟ್ಟಲು ಕೇಳಿದ ಜಾಗೆಯ ಬೆಲೆಯನ್ನು ಕೊಡಲು ಒಪ್ಪಿಗೆ ಇದ್ದರೆ ತಿಳಿಸಬೇಕೆಂದು ಕೇಳಿಕೊಂಡಿದ್ದರು. ಅದರಂತೆ ತೋಟಗಾರಿಕೆ ಇಲಾಖೆಯವರಿಂದ ಜಾಗೆಯ ಬೆಲೆಯನ್ನು ಸಂದಾಯ ಮಾಡಲು ಯಾವ ತರಹದ ಪ್ರತಿಕ್ರಿಯೆಯೂ ಬಂದಿರುವುದಿಲ್ಲ.

ಶ್ರೀ ಬಾವುರಾವ್ ದೇಶಪಾಂಡೆ. ಅಧ್ಯಕ್ಷರೆ, ಮೊದಲಿನ ಮಾರುಕಟ್ಟೆಯ ಸಮಿತಿಯವರು ಹಣ ತೆಗೆದುಕೊಳ್ಳದೆ ಕೊಟ್ಟಿದ್ದರು. ಈಗ ಆದಕ್ಕೆ ಅಡ್ಡಿ ಬಂದಿದೆ. ಇವೊತ್ತು ಮಾರ್ಕೆಟ್ ಇರುವುದು ರೈತರಿಗೆ. ಶೈತ್ಯಾಗಾರ ಆಗುವುದು ರೈತರಿಗಾಗಿಯೇ. ಆದ್ದರಿಂದ ಇನ್ನೂ ಹಣ ಹೆಚ್ಚಿಗೆ ಮಂಜೂರು ಮಾಡಿ ಅವರಿಗೆ ಜಮೀನನ್ನು ಕೊಟ್ಟು ಶೈತ್ಯಾಗಾರ ಕಟ್ಟಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಸುಧೀಂದ್ರರಾವ್ ಕಸಬೆ.—ಅಧ್ಯಕ್ಷರೆ, ಡಿಪಾರ್ಟ್‌ಮೆಂಟ್‌ನಿಂದ ಮಂಜೂರು ಆದನಂತರ ಏನು ಲ್ಯಾಂಡ್ ಅಕ್ವಿಜಿಷನ್ ಮಾಡಿಕೊಂಡಿದ್ದರು, ಆ ರೈತರು ತಾವು ಕೊಟ್ಟಿರತಕ್ಕಂತಹ ಹಣಕ್ಕೆ ತೃಪ್ತಿ ಆಗದೆ ದಾವ ಹಾಕಿದ್ದಾರೆ.

ಶ್ರೀ ಬಾವುರಾವ್ ದೇಶಪಾಂಡೆ.—ಅಧ್ಯಕ್ಷರೆ, ಇವೊತ್ತು ಕೋರ್ಟಿನಲ್ಲಿ ಇರತಕ್ಕ ಜಮೀನು ಬೇರೆ. ಇವರು ಕೊಟ್ಟಂತಹ ಜಮೀನು ಕೋರ್ಟಿನಲ್ಲಿ ಇಲ್ಲ. ಸಮಿತಿಯವರು ಕೊಟ್ಟಂತಹ ಜಮೀನು ಇದೆ. ಸರ್ಕಾರಿ ಅಧಿಕಾರಿಗಳು ಮಧ್ಯೆ ಪ್ರವೇಶ ಮಾಡಿದ್ದರಿಂದ ತೊಂದರೆಯಾಗಿದೆ. ಇಲ್ಲದೇ ಇದ್ದರೆ ಶೈತ್ಯಾಗಾರ ಆಗುತ್ತಿತ್ತು. ಸರ್ಕಾರಿ ಅಧಿಕಾರಿಗಳ ಮಧ್ಯ ಪ್ರವೇಶವನ್ನು ತಡೆಹಿಡಿಯಬೇಕು ಅಂತ ಹೇಳುತ್ತೇನೆ.

ಶ್ರೀ ಸುಧೀಂದ್ರರಾವ್ ಕಸಬೆ.—ಅಧ್ಯಕ್ಷರೆ, ಮಾನ್ಯ ಸದಸ್ಯರು, ಇದು ಕೋರ್ಟಿನಲ್ಲಿ ಇಲ್ಲ ಎನ್ನುವುದನ್ನು ನಾನು ಒಪ್ಪುವುದಿಲ್ಲ, ಸರ್ವೆ ನಂಬರ್ ೧೫೫ ಕೋರ್ಟಿನಲ್ಲಿದೆ. ಇನ್ನು ಮುಂದೆ ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದನ್ನು ಪರಿಶೀಲಿಸುತ್ತೇನೆ.

Pourakarmikas working in Police Department.

769 SRI C. M. ARMUGHAM (S. G. F.).—Will the Chief Minister be pleased to state.—

(a) the number of Pourakarmikas employed in the Police Department, their pay scales and service conditions ;

(b) the number of Pourakarmikas employed on casual and temporary basis in the Police Department, their salary and since how long they are working as temporary or casual labour ?

---

† Indicates that remarks or speeches have not been revised by the member concerned.